# ಬಾಗಲಕೋಟ ವಿಶ್ವವಿದ್ಯಾಲಯ

(ಕರ್ನಾಟಕ ಸರ್ಕಾರದ ರಾಜ್ಯ ಸಾರ್ವಜನಿಕ ವಿಶ್ವವಿದ್ಯಾಲಯ)
ಮುಧೋಳ ರಸ್ತೆ, ಜಮಖಂಡಿ-587301 ಬಾಗಲಕೋಟೆ ಜಿಲ್ಲೆ

# Bagalkot University

(State Public University of Govt. of Karanataka)
Mudhol Road, Jamkhandi-587301 Dist: Bagalkote

Mail ID : bgkujkd@gmail.com
Website: https:// bgku.ac.in

**ಕುಲಸಚಿವರ ಕಾರ್ಯಾಲಯ** Tel No: (08353)295123, 295124


BGKUJ/RO/2024-25/840 Date: 09.11.2024

## ಮೂರನೇಯ ಹಂತದ ವಿವಿಧ ವಿಭಾಗಗಳ ಸ್ನಾತಕೋತ್ತರ ಪದವಿ ಪ್ರವೇಶಾತಿ ಪ್ರಕ್ರಿಯೆ ವೇಳಾಪಟ್ಟಿ 2024-25

| S.N | Counselling Date | Department | Session | Time | Merit (as per rank) | Venue |
|---|---|---|---|---|---|---|
| 1 | 12-11-2024 | M.Com | Morning | 10.30 am 01.30 pm | 1 to 250 | Function Hall |
| | | M.A Political Science | Morning | 10.30 am 01.30 pm | 1 to 67 | |
| | | M.Sc Physics | Morning | 10.30 am 01.30 pm | 1 to 44 | |
| | | M.Sc Chemistry | Morning | 10.30 am 01.30 pm | 1 to 70 | |
| | | M.A English | Morning | 10.30 am 01.30 pm | 1 to 73 | |
| | | M.S.W | Morning | 10.30 am 01.30 pm | 1 to 21 | |
| | | M.A History | Morning | 10.30 am 01.30 pm | 1 to 17 | |
| | | M.A History and Archaeology | Morning | 10.30 am 01.30 pm | 1 to 35 | |
| | | M.Sc Mathematics | Morning | 10.30 am 01.30 pm | 1 to 101 | |
| | | M.A Kannada | Morning | 10.30 am 01.30 pm | 1 to 21 | |
| | | M.P.Ed | Morning | 10.30 am 01.30 pm | 1 to 29 | |
| | | M.Ed | Morning | 10.30 am 01.30 pm | to 3 | |

- ಮೆರಿಟ್ ಲಿಸ್ಟನಲ್ಲಿ ಹೆಸರು ಇಲ್ಲದವರು ಹಾಗೂ ವಿವಿಧ ಸ್ನಾತಕೋತ್ತರ ಕೋರ್ಸಗಳಿಗೆ ಅರ್ಜಿಯನ್ನು ಸಲ್ಲಿಸದೆ ಇರುವಂತ ಅಭ್ಯರ್ಥಿಗಳು. ಸದರಿ ದಿನದಂದು ಹಾಜರಿದ್ದು ಅರ್ಜಿಯನ್ನು ಸಲ್ಲಿಸಿ ಸೀಟು ಪ್ರಕ್ರಿಯೆಯಲ್ಲಿ ಭಾಗವಹಿಸತಕ್ಕದ್ದು.

ಕುಲಸಚಿವರು
ಬಾಗಲಕೋಟ ವಿಶ್ವವಿದ್ಯಾಲಯ
(ಕರ್ನಾಟಕ ಸರ್ಕಾರದ ರಾಜ್ಯ ಸಾರ್ವಜನಿಕ ವಿಶ್ವವಿದ್ಯಾಲಯ)
ಜಮಖಂಡಿ-587301. ಜಿ. ಬಾಗಲಕೋಟ.

## ಅಭ್ಯರ್ಥಿಗಳಿಗೆ ಸೂಚನೆಗಳು:

1. ಅಭ್ಯರ್ಥಿಗಳು ಕೌನ್ಸಿಲಿಂಗ್‌ಗೆ ಹಾಜರಾಗುವ ದಿನಾಂಕದಂದು ಶೈಕ್ಷಣಿಕ ಹಾಗೂ ಇನ್ನಿತರೆ ಸಂಬಧಪಟ್ಟ ಮೂಲ ದಾಖಲೆಗಳನ್ನು ಮತ್ತು ಪ್ರತಿಗಳನ್ನು ಹಾಗೂ ಅರ್ಜಿ ಸಲ್ಲಿಸುವಾಗ UUCMS ನಲ್ಲಿ ನೊಂದಾವಣೆ ಮಾಡಿದ UUCMS User id and Password ವಿದ್ಯಾರ್ಥಿಗಳು ಕಡ್ಡಾಯವಾಗಿ ತೆಗೆದುಕೊಂಡು ಬರಬೇಕು. (ಉದಾ: User id 220103456 Password: Ram@123)
2. ಕೌನ್ಸಿಲಿಂಗ್ ದಿನಾಂಕದಂದು ಸೀಟು ಹಂಚಿಕೆ ದಿನವೇ ಪೂರ್ಣ ಪ್ರಮಾಣದ ಪ್ರವೇಶ ಶುಲ್ಕವನ್ನು ಕಡ್ಡಾಯವಾಗಿ UUCMS ಮೂಲಕ Online ಭರಿಸಬೇಕು ಹಾಗೂ ಭರಿಸಿದ ರಶೀದಿಯನ್ನು ಸಂಬಂಧಪಟ್ಟ ವಿಭಾಗಕ್ಕೆ ಕಡ್ಡಾಯವಾಗಿ ನೀಡಬೇಕು. ಒಂದು ವೇಳೆ ಹಣವನ್ನು ಸಂದಾಯ ಮಾಡಲು ವಿಫಲವಾದಲ್ಲಿ ಅಂತಹ ವಿದ್ಯಾರ್ಥಿಗಳನ್ನು ಪ್ರವೇಶಾತಿಗೆ ಪರಿಗಣಿಸಲಾಗುವುದಿಲ್ಲ.
3. ಪ್ರವೇಶಾತಿ ಶುಲ್ಕಗಳ ವಿವರ ವಿಶ್ವವಿದ್ಯಾಲಯದ ವೆಬ್‌ಸೈಟನಲ್ಲಿ www.bgku.ac.in ನೋಡಬಹುದು.
4. ಸಮಾಜ ಕಲ್ಯಾಣ ಇಲಾಖೆಯಿಂದ FREESHIP CARDನ್ನು ಪಡೆದಿರುವ ಪರಿಶಿಷ್ಟಜಾತಿ ಹಾಗೂ ಪರಿಶಿಷ್ಟ ಪಂಗಡ ಅಭ್ಯರ್ಥಿಗಳು FREESHIP CARDನ್ನು ಪ್ರವೇಶಾತಿ ಸಮಯದಲ್ಲಿ ಹಾಜರುಪಡಿಸಿದಲ್ಲಿ ಮಾತ್ರ (All Course Candidates (Except MSW Course)) ರೂ.1,450/-ಗಳನ್ನು ಹಾಗೂ ಸಮಾಜಕಾರ್ಯ ಕೋರ್ಸ ಅಭ್ಯರ್ಥಿಗಳಿಗೆ (MSW Course Candidates) ರೂ.3,450/-ಗಳ ಪ್ರವೇಶಾತಿ ಶುಲ್ಕಗಳನ್ನು ಮಾತ್ರ ಪಾವತಿಮಾಡಿಕೊಂಡು ಪ್ರವೇಶಾತಿ ನೀಡಲಾಗುವುದು.
5. ಮುಂದುವರೆದು, ಅಭ್ಯರ್ಥಿಯು ಪ್ರವೇಶ ಪಡೆದ ನಂತರ ಶುಲ್ಕ ವಿನಾಯಿತಿ ಪಡೆದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳು ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶದಲ್ಲಿ (https://ssp.postmatric.karnataka.gov.in/) ಕಡ್ಡಾಯವಾಗಿ ಅರ್ಜಿಯನ್ನು ಸಲ್ಲಿಸಿ, ಒಂದು ಮುದ್ರಿತ ಪ್ರತಿಯನ್ನು ಸಂಬಂಧಪಟ್ಟ ಸ್ನಾತಕೋತ್ತರ ವಿಭಾಗಗಳಿಗೆ/ಮಹಾವಿದ್ಯಾಲಯಗಳಿಗೆ ಸಲ್ಲಿಸುವುದು.
6. ಸಮಾಜ ಕಲ್ಯಾಣ ಇಲಾಖೆಯು ವಿದ್ಯಾರ್ಥಿ ವೇತನ ಪಾವತಿಯಾದ ನಂತರ ಸಂಬಂಧಪಟ್ಟ ಸ್ನಾತಕೋತ್ತರ ವಿಭಾಗಗಳಿಗೆ/ಮಹಾವಿದ್ಯಾಲಯಗಳಿಗೆ ಮರುಪಾವತಿ ಮಾಡುವುದು.
7. ಶುಲ್ಕ ವಿನಾಯಿತಿ ಪಡೆದ ವಿದ್ಯಾರ್ಥಿಗಳು ಸ್ನಾತಕೋತ್ತರ ವಿಭಾಗದ ಯಾವುದೇ ಕೋರ್ಸನ್ನು ವಿಶ್ವವಿದ್ಯಾಲಯದ ಅನುಮತಿ ಇಲ್ಲದೇ ಅರ್ಧಕ್ಕೆ ಮೊಟಕುಗೊಳಿಸುವಂತಿಲ್ಲ. ಒಂದು ವೇಳೆ ಅನಿವಾರ್ಯ ಕಾರಣಗಳಿಂದ ಕೋರ್ಸನ್ನು ಮೊಟಕುಗೊಳಿಸಬೇಕಾಗಿ ಬಂದಲ್ಲಿ, ವಿನಾಯಿತಿ ಪಡೆಯಲಾದ ಸಂಪೂರ್ಣ ಶುಲ್ಕವನ್ನು ಸಂಬಂಧಪಟ್ಟ ಸ್ನಾತಕೋತ್ತರ ವಿಭಾಗಗಳಿಗೆ/ಮಹಾವಿದ್ಯಾಲಯಗಳಿಗೆ ಪಾವತಿಸುವುದು.
8. ಕೌನ್ಸಲಿಂಗ್ ವೇಳಾಪಟ್ಟಿಯಲ್ಲಿ ತಿಳಿಸಿರುವ ದಿನಾಂಕ ಮತ್ತು ಸಮಯಕ್ಕೆ ಸರಿಯಾಗಿ ಹಾಜರಾಗಬೇಕು. ಒಂದು ವೇಳೆ ಹಾಜರಾಗದೇ ಇದ್ದಲ್ಲಿ ಮುಂದಿನ ಆಗು-ಹೋಗುಗಳಿಗೆ ಅಭ್ಯರ್ಥಿಗಳೇ ಹೊಣೆಗಾರರಾಗಿರುತ್ತಾರೆ.
9. ಆಯಾ ವಿಭಾಗಗಳ ಸೂಚನಾ ಫಲಕದಲ್ಲಿ ಹಾಗೂ ವೆಬ್‌ಸೈಟ್‌ನಲ್ಲಿ ಅಳವಡಿಸಿದ ಮೆರಿಟ್ ಪಟ್ಟಿಯನ್ನು (Merit List) ನೋಡುವುದು ಹಾಗೂ ತಮ್ಮ ಕ್ರಮ ಸಂಖ್ಯೆಯನ್ನು ಗಮನದಲ್ಲಿ ಇಟ್ಟುಕೊಳ್ಳುವುದು, ಕೌನ್ಸಿಲಿಂಗ ಸಂದರ್ಭದಲ್ಲಿ ತಮ್ಮ ಮೂಲ ದಾಖಲೆಗಳನ್ನು ಆಯಾ ವಿಭಾಗಗಳಲ್ಲಿ ಪರಿಶೀಲನೆಗೆ ಒಳಪಡಿಸುವುದು.
10. ಚಾಲ್ತಿಯಲ್ಲಿರುವ ಜಾತಿ ಪ್ರಮಾಣ ಪತ್ರ ಮತ್ತು ಆದಾಯ ಪ್ರಮಾಣ ಪತ್ರವನ್ನು ಒದಗಿಸುವುದು.
11. ಕರ್ನಾಟಕೇತರ ವಿಶ್ವವಿದ್ಯಾಲಯದ ಅಭ್ಯರ್ಥಿಗಳು ಹಾಗೂ ಕರ್ನಾಟಕ ಮೂಲದ ಇತರೇ ವಿಶ್ವವಿದ್ಯಾಲಯದ ಅಭ್ಯರ್ಥಿಗಳು ಪ್ರವೇಶಾತಿಗೆ ಆಯ್ಕೆಯಾದಲ್ಲಿ, ಕಡ್ಡಾಯವಾಗಿ ವಿಶ್ವವಿದ್ಯಾಲಯದಿಂದ ಅರ್ಹತಾ ಪ್ರಮಾಣ ಪತ್ರ ಪಡೆದುಕೊಳ್ಳಬೇಕು.
12. ಹೈದರಾಬಾದ-ಕರ್ನಾಟಕ ಭಾಗದ ವಿದ್ಯಾರ್ಥಿಗಳು ಮೀಸಲಾತಿಗಾಗಿ ಸಂಬಂಧಪಟ್ಟ ಅಧಿಕಾರಿಗಳಿಂದ ಅನುಚ್ಛೇದ 371 (ಜೆ) ಗೆ ಅನ್ವಯಿಸುವಂತೆ ಅರ್ಹತಾ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಒದಗಿಸಬೇಕು.
13. ಬಾಗಲಕೋಟ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಆತ್ಮಹತ್ಯೆ ಮಾಡಿಕೊಂಡ ರೈತರ ಮಕ್ಕಳಿಗೆ ಪ್ರವೇಶಾತಿ ನೀಡಲಾಗುವುದು. ಈ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರದಿಂದ ಪ್ರಮಾಣ ಪತ್ರವನ್ನು (ಆತ್ಮಹತ್ಯೆ ಮಾಡಿಕೊಂಡ ಬಗ್ಗೆ) ಪಡೆದು, ಪ್ರವೇಶಾತಿ ಅರ್ಜಿಯೊಂದಿಗೆ ಲಗತ್ತಿಸತಕ್ಕದ್ದು.
14. ಹೊರನಾಡು/ಗಡಿನಾಡು ಭಾಗದ ವಿದ್ಯಾರ್ಥಿಗಳು ಸಕ್ಷಮ ಪ್ರಾಧಿಕಾರದ ಪ್ರಮಾಣ ಪತ್ರ ಲಗತ್ತಿಸುವುದು.
15. ಪ್ರವೇಶ ಪಡೆದ ಅಭ್ಯರ್ಥಿಗಳು ತಾವು ಆಯ್ಕೆ ಮಾಡಿಕೊಂಡ ವಿಶ್ವವಿದ್ಯಾಲಯ/ಮಹಾವಿದ್ಯಾಲಯಕ್ಕೆ ಎರಡು ದಿನದೊಳಗಾಗಿ ಹಾಜರಾಗಿ ವರದಿಯನ್ನು ಒಪ್ಪಿಸುವುದು. ತಪ್ಪಿದಲ್ಲಿ ತಮ್ಮ ಮುಂದಿನ ಆಗುಹೋಗುಗಳಿಗೆ ತಾವೇ ಜವಾಬ್ದಾರರು.
16. ವಿದ್ಯಾರ್ಥಿಗಳು ಸರಿಯಾದ ಸಮಯಕ್ಕೆ ಹಾಜರಿರಬೇಕು. ಒಂದು ವೇಳೆ ನಿಗದಿತ ಸಮಯಕ್ಕೆ ಬಾರದ ವಿದ್ಯಾರ್ಥಿಗಳ ಪ್ರವೇಶಾತಿಗೆ ಪರಿಗಣಿಸಲಾಗುವುದಿಲ್ಲ.
17. ಸೀಟು ಪ್ರಕ್ರಿಯೆಯಲ್ಲಿ ಭಾಗವಹಿಸುವ ಅಭ್ಯರ್ಥಿಗಳು ಕಡ್ಡಾಯವಾಗಿ ಹಾಜರಿರಬೇಕು.

**ಕುಲಸಚಿವರು**
ಬಾಗಲಕೋಟ ವಿಶ್ವವಿದ್ಯಾಲಯ
(ಕರ್ನಾಟಕ ಸರ್ಕಾರದ ರಾಜ್ಯ ಸಾರ್ವಜನಿಕ ವಿಶ್ವವಿದ್ಯಾಲಯ)
ಜಮಖಂಡಿ-587301. ಜಿ. ಬಾಗಲಕೋಟ.